ಶ್ರೀ ಬಿ. ಚನ್ನಬೈರೇಗೌಡರು.—ಹಾಗೆ ಬೆಳೆಯದಿದ್ದರೆ ಏನು ಮಾಡುತ್ತೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಂಥವರಿಂದ ಹಣವನ್ನು ವಸೂಲು ಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಅಂತಹ ಸಂದರ್ಭಗಳು ಸರ್ಕಾರದವರ ಗಮನಕ್ಕೆ ಬಂದಿವೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿವೆ. ತುಮಕೂರು ಜಿಲ್ಲೆಯಲ್ಲೇ 50 ಕೇಸುಗಳಿವೆ.

Restoration of Pathapalli Majure Hosahalli Tank, Srinivasapur Taluk.

*ಪ್ರಶ್ನೆ 62.—ಶ್ರೀ ಜಿ. ನಾರಾಯಣಗೌಡರು (ಕೋಲಾರ ಡಿಸ್ಟ್ರಿಕ್ಟ್—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕಂಡ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಶ್ರೀನಿವಾಸಪುರ ತಾಲ್ಲೂಕು ಹೊಗಳಗೆರೆ ಸರ್ಕಲಿಗೆ ಸೇರಿದ ಪಾತಪಲ್ಲಿ ಮಜುರೆ ಹೊಸಹಳ್ಳಿ ಕೆರೆಯನ್ನು ಉಪಯೋಗಿಸದೆ ಬಿಟ್ಟು ಬಿಟ್ಟುದು ಯಾವಾಗ ;

(b) ಈ ಕೆರೆಗೆ ಸೇರಿದ ಅಚ್ಚುಕಟ್ಟಿನ ವಿಸ್ತೀರ್ಣವೇನು ;

(c) ಹೊಸಹಳ್ಳಿ ಗ್ರಾಮಕ್ಕೆ ಯಾವ ಕೆರೆಯೂ ಇಲ್ಲವೆಂಬುದು ಸರ್ಕಾರದವರಿಗೆ ತಿಳಿದಿದೆಯೆ ;

(d) ಅಚ್ಚುಕಟ್ಟನ್ನು ಸಾಗುವಳಿಗೆ ಬಿಟ್ಟುಕೊಡಲಾಗಿದೆಯೆ ?

ಉತ್ತರ.—ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜು ಶಾಖೆಯ ಸಚಿವರು) —

(a) ಅದನ್ನು ಉಪಯೋಗಿಸದೆ ಬಿಟ್ಟು ಸುಮಾರು 60 ವರ್ಷಗಳಾಗಿವೆ.

(b) 15 ಎಕರೆಗಳು 26 ಗುಂಟೆಗಳು.

(c) ತಿಳಿದಿದೆ.

(d) ಇಲ್ಲ.

ಶ್ರೀ ಜಿ. ನಾರಾಯಣಗೌಡರು.—ಈ ಕೆರೆಯನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ಕೆರೆಯನ್ನು ಕೈಬಿಟ್ಟು 60 ವರ್ಷವಾಗಿದೆ. ಇನ್ನುಮುಂದೆ ಹೊಸದಾಗಿ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಜಿ. ನಾರಾಯಣಗೌಡರು.—ಆ ಕೆರೆಯನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಸಾಧ್ಯವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೆ ಅಚ್ಚುಕಟ್ಟಿರುವುದು 15 ಎಕರೆ. ಅಂದಾಜು ತಯಾರಿಸಿ ಎಷ್ಟು ಹಣ ಖರ್ಚಾಗಬಹುದೆಂದು ನೋಡಿ ಯೋಚನೆ ಮಾಡಬೇಕು.

ಶ್ರೀ ಜಿ. ನಾರಾಯಣಗೌಡರು.—ಜೀರ್ಣೋದ್ಧಾರ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಅದರ ಅಚ್ಚುಕಟ್ಟನ್ನು ವ್ಯವಸಾಯಕ್ಕೆ ಕೊಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯೋಚನೆ ಮಾಡುತ್ತೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಈ ಕೆರೆಯನ್ನು ಜೀರ್ಣೋದ್ಧಾರ ಮಾಡಬೇಕೆಂದು ಅರ್ಜಿ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂಧಿರ ಬಹುದು, ನೋಟೀಸ್‌ಬೇಕು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಹಿಂದೆ ಅಂದಾಜಾಗಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಈ ಕೆರೆಯ ಅಂಗಳ ಎಷ್ಟಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು.—ಸಾಗುವಳಿಗೆ ಕೊಡಲು ಕೆರೆಯ ಅಂಗಳ ಜಾಸ್ತಿ ಇದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು.—ಅಂದಾಜು ಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಗಲೇ ಉತ್ತರ ಹೇಳಿದ್ದೇನೆ.

Arrangement for payment of Pay or Potigi to village officers transferred from Madras State to Mysore.

*ಪ್ರಶ್ನೆ 69.—ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಡಿಸ್ಟ್ರಿಕ್ಟ್—ನಿಮ್ನ ತರಗತಿಗಳವರ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಮೈಸೂರು ಸಂಸ್ಥಾನದಿಂದ ಮದರಾಸು ಪ್ರಾಂತಕ್ಕೂ ಮತ್ತು ಮದರಾಸು ಪ್ರಾಂತದಿಂದ ಮೈಸೂರು ಸಂಸ್ಥಾನಕ್ಕೂ ವರ್ಗಾಯಿಸಲಾಗಿರುವ ಗ್ರಾಮಗಳ ಸಂಖ್ಯೆ, ಅವುಗಳ ಹೆಸರುಗಳು, ಹುಟ್ಟುವಳಿ ಮೊದಲಾದುವು ಮತ್ತು ಅವುಗಳು ಹಾಗೆ ವರ್ಗಾಯಿಸಲ್ಪಟ್ಟ ತಾರೀಖುಗಳು;

(b) ಮದರಾಸು ಪ್ರಾಂತದಿಂದ ಮೈಸೂರು ಸಂಸ್ಥಾನಕ್ಕೆ ಬರತಕ್ಕ ಪಟೇಲರುಗಳ, ಶಾನುಭೋಗರುಗಳ, ತೋಟಿಗಳು ಮತ್ತು ತಳವಾರರುಗಳ (ಅಥವಾ ಮದರಾಸು ಪ್ರಾಂತದಲ್ಲಿ ಬೇರೆ ಯಾವುದಾದರೂ ಹೆಸರಿನಿಂದ ಕರೆಯಲ್ಪಡತಕ್ಕ ತೋಟಿಗಳು ಅಥವಾ ತಳವಾರರುಗಳ) ಸಂಖ್ಯೆ ಎಷ್ಟು;

(c) ಗ್ರಾಮ ನೌಕರರುಗಳಿಗೆ ಸಂಬಳಗಳನ್ನು ಕೊಡಲು ಮಾಡಿರತಕ್ಕ ಏರ್ಪಾಡುಗಳೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜು ಶಾಖೆಯ ಸಚಿವರು).—

ಉತ್ತರ.—(a) ಮೈಸೂರು ಸಂಸ್ಥಾನದಿಂದ ಮದರಾಸು ಪ್ರಾಂತಕ್ಕೆ ವರ್ಗಾಯಿಸಲಾಗಿರುವ ಗ್ರಾಮಗಳು :

ತುಮಕೂರು ಡಿಸ್ಟ್ರಿಕ್ಟು

ಯಾವುವೂ ಇಲ್ಲ.

ಬೆಂಗಳೂರು ಡಿಸ್ಟ್ರಿಕ್ಟು

ಯಾವುವೂ ಇಲ್ಲ.